ಸಾಹಿತ್ಯದಲ್ಲಿ ಅತೀವ ಆಸಕ್ತಿ ಇದ್ದಂಥ ಸಿದ್ಲಿಂಗನು ಮುದ್ದಣ–ಮನೋರಮೆಯರೋಪಾದಿಯಲ್ಲಿ ಕಾವ್ಯಮಯವಾಗಿ ಮನದನ್ನೆಯೊಡನೆ ಸರಸ ಸಲ್ಲಾಪ ನಡೆಸುವ ತನ್ನ ಆಸೆ ಭಂಗವಾದುದಕ್ಕೆ ತೀವ್ರ ನಿರಾಸೆಗೊಂಡರೂ ತನ್ನ ತ್ಯಾಗ ಮನೋಭಾವ ಮೆರೆಯುವುದಕ್ಕೆ ಅವಕಾಶ ದೊರಕಿತೆಂದು ಸಂಭ್ರಮಿಸಿದನು. ಈಗಲಾದರೂ ಜನರಿಗೆ ತಾನು ಎಷ್ಟು ವಿಶಾಲ ಹೃದಯವನು ಎಂದು ಮನದಟ್ಟಾಗುತ್ತದೆ ಎಂದುಕೊಳ್ಳುತ್ತಾ ಪುಳಕಗೊಂಡನು. ಹಾಗೂ ಗೌರಿಯ ಜೊತೆ ಫೋನಿನಲ್ಲಿ ಮಾತನಾಡುವ ಸಾಧ್ಯತೆ ಇಲ್ಲವೆಂದರಿತು ತನ್ನ ಸರಸ–ವಿನೋದದ ಆಸೆಯನ್ನು ಪತ್ರದ ಮೂಲಕವೇ ಈಡೇರಿಸಿಕೊಳ್ಳುವ ಆಸೆಯಿಂದ ತನ್ನೆಲ್ಲ ಶಬ್ದಭಂಡಾರವನ್ನುಪಯೋಗಿಸಿ ಒಂದು ಕಾವ್ಯಮಯ ಪ್ರೇಮಪತ್ರವನ್ನು ಬರೆದು ಕಳಿಸಿ ಚಾತಕಪಕ್ಷಿಯಂತೆ ಕಾದುಕುಳಿತರೂ ಗೌರಿಯಿಂದ ಮರು ಉತ್ತರ ಬಾರದಿರಲು ಖಿನ್ನನಾದನು.

ಈ ಪ್ರಕಾರವಾಗಿ ಭಗ್ನ ಹೃದಯಿಯಾದ ಸಿದ್ಲಿಂಗನು ಮೌನಗೌರಿಯೆಂಬ ಕರ್ಪೂರದ ಗೊಂಬೆಯನ್ನು ಸಿದ್ಲಿಂಗನೆಂಬ ಪ್ರಣಯಾಕಾಂಕ್ಷಿಯು ತನ್ನ ಮನಮಂದಿರದಲ್ಲಿ ಪ್ರತಿಷ್ಠಾಪಿಸಿ ಆರಾಧಿಸ ತೊಡಗಿದನು. ಇದೆಲ್ಲದರ ಪರಿಣಾಮವಾಗಿ ಸೋಜಿಗವೆಂಬಂತೆ ತನ್ನ ಸಹೋದ್ಯೋಗಿಗಳೊಡನೆ ಸಿದ್ಲಿಂಗನು ಹಸನ್ಮುಖಿಯಾಗಿ ವ್ಯವಹರಿಸಲು ಶುರುಮಾಡಿಕೊಂಡನು. ಅವರೆಲ್ಲ ಇವನಲ್ಲಾದ ಬದಲಾವಣೆಗೆ ಅಚ್ಚರಿಯಿಂದ, "ಓಹೋ" ಎನ್ನುತ್ತಾ ಬಾಯಿ ಮೇಲೆ ಬೆರಳಿಟ್ಟುಕೊಳ್ಳುವಂತಾಯಿತು.

ಹೀಗೆಯೇ ಇರುವಾಗ ಒಂದು ಬೆಳಗಿನ ಜಾವ ಸಿದ್ಲಿಂಗನಿಗೆ ಕನಸೊಂದು ಬಿದ್ದಿತು. ಸಿದ್ಲಿಂಗನು ಗೌರಿಯನ್ನು ಪ್ರೇಮತುಂಬಿದ ದನಿಯಲ್ಲಿ, "ಮೌನವೇ ಆಭರಣ, ಮುಗುಳ್ನಗೆ ಶಶಿಕಿರಣ, ನೋಟವೇ ಹೂಬಾಣ, ಒಲವಿನ ಮಧುವನ" ಎಂಬುದಾಗಿ ಓಲೈಸುತ್ತಾ ಹಾಡು ಹಾಡುತ್ತಿದ್ದನು. ಹಾಡಿ ಮುಗಿಸುವುದರೊಳಗಾಗಿ ಸಿದ್ಲಿಂಗನ ದನಿಯೇ ನಿಂತು ಹೋಯ್ತು. ಶತಪ್ರಯತ್ನ ಮಾಡಿದರೂ ಮುಂದೆ ಹಾಡಲಾಗಲಿಲ್ಲ.

ನಸುಕಿನಲ್ಲಿ ಬಿದ್ದ ಈ ಸ್ವಪ್ನದ ಶಕುನ ಶುಭವೋ, ಅಶುಭವೋ ಎಂದೆಲ್ಲಾ ಬಹಳವಾಗಿ ತಲೆ ಕೆಡಿಸಿಕೊಂಡರೂ ಏನೂ ಹೊಳೆಯದಿರಲು, ಅಜೀರ್ಣವಾಗುವಷ್ಟು ಕ್ರಾಂತಿಕಾರಿ ವಿಚಾರಗಳನ್ನು ತಲೆ ತುಂಬಾ ತುಂಬಿಕೊಂಡು ನಾಸ್ತಿಕನಾಗಿದ್ದ ಸಿದ್ಲಿಂಗನು, "ಶಿವಪ್ಪಾ ಕಾಯೋ ತಂದೆ" ಎಂಬುದಾಗಿ ತನ್ನ ಜೀವನದಲ್ಲಿ ಮೊತ್ತ ಮೊದಲ ಬಾರಿಗೆ ದೇವರನ್ನು ಬೇಡಿಕೊಂಡನು. ಈ ವಿಚಿತ್ರ ತೊಳಲಾಟದಲ್ಲಿರುವಾಗಲೇ ಮದುವೆಯ ದಿನ ಸಮೀಪಿಸಲು ಸಿದ್ಲಿಂಗನ ಮನೋಭಿಲಾಷೆಯಂತೆ ಮದುವೆಯನ್ನು ದೇವಸ್ಥಾನವೊಂದರಲ್ಲಿ ಸರಳವಾಗಿ ನಾಲ್ಕಾರು ಜನ ಹಿರಿಯರ ಸಮ್ಮುಖದಲ್ಲಿ ನೆರವೇರಿಸಲಾಯಿತು.

★★★

ಎಲ್ಲರ ಬಾಳಿನಲ್ಲಿ ಇರುವಂತೆ ಸಿದ್ಲಿಂಗನ ಜೀವನದಲ್ಲಿಯೂ ಪ್ರಥಮರಾತ್ರಿ ಎಂದು ಕರೆಯಲ್ಪಡುವ ಪರೀಕ್ಷೆಯ ಗಳಿಗೆ ಬಂದೇ ಬಂದಿತು. ಸಿದ್ಲಿಂಗನು ದೈಹಿಕವಾಗಿಯಷ್ಟೆ ಅಲ್ಲದೇ ಮಾನಸಿಕವಾಗಿಯೂ ತಯಾರಿ ನಡೆಸಿದ್ದನು. ತಾನೆಂದೂ ಪತಿಯೆಂಬುವ ಗರ್ವದಿಂದ ಅಧಿಕಾರ ಚಲಾಯಿಸಿ ತನ್ನ ಮನದನ್ನೆಯನ್ನು ನೋಯಿಸದೇ, ಗೌರಿಯನ್ನು ತನ್ನ ಬಾಳಸಂಗಾತಿಯಂತೆ ನೋಡಿಕೊಳ್ಳಲು ಪಣತೊಟ್ಟಿದ್ದನು. ಮಾತಿನಲ್ಲಿ ಹೇಳಲಾಗದ ಅವಳ ಎಲ್ಲಾ ಬಯಕೆಗಳನ್ನು ಕಣ್ಣನೋಟದಿಂದಲೇ ಅರಿತು, ನೆರವೇರಿಸಿ ಅವಳ ಮನ ಗೆಲ್ಲುವೆನು ಎಂದು ಲೆಕ್ಕ ಹಾಕಿದ್ದನು.

ಅಂತೂ ನಿಗದಿತ ಗಳಿಗೆಗೆ ಸರಿಯಾಗಿ ಗೌರಿ ಹಾಲಿನ ಲೋಟದೊಂದಿಗೆ ಶಯ್ಯಾಗೃಹದೊಳಗೆ ಪ್ರವೇಶ ಮಾಡಿದಳು. ಮೊಟ್ಟಮೊದಲಬಾರಿಗೆ ಗೌರಿಯೊಡನೆ ತಾನು ಏಕಾಂತದಲ್ಲಿರುವುದು ಅರಿವಿಗೆ ಬಂದು ಸಿದ್ಲಿಂಗನಿಗೆ ಸಣ್ಣಗೆ ಬೆವರಲು ಶುರುವಾಯ್ತು. ಪ್ರೇಮೋದ್ವೇಗದಿಂದ ಕಂಪಿಸುತ್ತಿದ್ದ